# ಶಾಲೆಯಲ್ಲಿ ಪೈ ದಿನ

**(ಪೈ ಬಗ್ಗೆ ಮಾಹಿತಿ ಮತ್ತು ಪ್ರಯೋಗಗಳು)**

**ಪೈ ಎಂಬುದು ಗಣಿತ ಶಾಸ್ತ್ರದಲ್ಲಿ ಬರುವ ಒಂದು ಸ್ಥಿರಾಂಕ. ಇದು ವೃತ್ತಾಕಾರದ ವಸ್ತುವನ್ನು ಲೆಕ್ಕ ಮಾಡಲು ಅನಿವಾರ್ಯ. ಇದರ ಬೆಲೆಯು ಅಂದಾಜಾಗಿ 22/7 ಅಥವಾ 3.141. ಜುಲೈ 22 ನ್ನು 22/7 ಎಂದು ಬರೆಯುವುದರಿಂದ ಆ ದಿನವನ್ನು ಪೈ ದಿನ ಎಂದು ಆಚರಿಸುತ್ತಾರೆ. Π ಎಂಬುದು ವೃತ್ತದ ಪರಿಧಿ ಮತ್ತು ವ್ಯಾಸದ ಅನುಪಾತ ($\pi$=C/D).**

## Π ಬೆಲೆ ಕಂಡು ಹಿಡಿಯುವ ವಿಧಾನಗಳು:

**ಕೆಳಕಂಡ ಪ್ರಯೋಗಗಳನ್ನು ಮೂರು ವಿಭಿನ್ನ ರೀತಿಯಲ್ಲಿ ಮಾಡಿ ಸರಾಸರಿ ಕಂಡು ಹಿಡಿಯಿರಿ.**

**1. ಕಾರ್ಡ್ ಬೋರ್ಡಿನಲ್ಲಿ ಒಂದು ವೃತ್ತವನ್ನು ರಚಿಸಿ. ಅದರ ವ್ಯಾಸಗಳನ್ನು ಕತ್ತರಿಸಿ. 16 ಅಥವಾ ಇನ್ನೂ ಹೆಚ್ಚು ಸಮ ಭಾಗಗಳನ್ನಾಗಿ ಮಾಡಿ. ಈಗ ಕತ್ತರಿಸಿದ ತ್ರಿಭುಜಗಳನ್ನು ಆಯತಾಕಾರದಲ್ಲಿ ಜೋಡಿಸಿ. ಆಯತದ ಉದ್ದ ಮತ್ತು ಅಗಲವನ್ನು ಅಳೆಯಿರಿ. Π ಬೆಲೆಯನ್ನು ಕಂಡುಹಿಡಿಯಿರಿ.**

**Π= ಈ ಆಯತದ ಉದ್ದ / ಈ ಆಯತದ ಅಗಲ**

**2. ಕೈವಾರದಿಂದ ಒಂದು ನಿರ್ದಿಷ್ಟ ತ್ರಿಜ್ಯ (r) ವನ್ನು ಅಳೆದು ಒಂದು ವೃತ್ತ ರಚಿಸಿ. ವೃತ್ತದ ಪರಿಧಿ (C) ಯನ್ನು ದಾರದ ಸಹಾಯದಿಂದ ಅಳತೆ ಮಾಡಿ. Π ಬೆಲೆಯನ್ನು ಕಂಡುಹಿಡಿಯಿರಿ. ( $\pi$ = [c] / [2r] ).**

**3. ಮೇಲ್ಕಂಡ ಪ್ರಯೋಗವನ್ನು ವೃತ್ತಾಕಾರದ ವಸ್ತುವನ್ನು ಉಪಯೋಗಿಸಿ ರಚಿಸಿ. ಅದರ ವ್ಯಾಸ (d) & ಸುತ್ತಳತೆ (c) ಯನ್ನು ಅಳೆದು ಪಟ್ಟಿ ಮಾಡಿ. ನಂತರ Π ಬೆಲೆಯನ್ನು ಕಂಡುಹಿಡಿಯಿರಿ. ($\pi$ = [c]/[d]).**

**4. ಕೈವಾರದ ಸಹಾಯದಿಂದ ಒಂದು ನಿರ್ದಿಷ್ಟ ತ್ರಿಜ್ಯ (r) ದ ವೃತ್ತವನ್ನುಗ್ರಾಫ್ ಪೇಪರ್ ಅಲ್ಲಿ ರಚಿಸಿ. ರಚಿಸಿದ ವೃತದ ವಿಸ್ತೀರ್ಣ (A) ವನ್ನು ಕಂಡು ಹಿಡಿಯಲು ಸಣ್ಣ ಸಣ್ಣ ಚೌಕವನ್ನು ಎಣಿಸಿ, ನೂರರಿಂದ (100) ಭಾಗಿಸಿದರೆ ವಿಸ್ತೀರ್ಣವು ಚ.ಸೆಂ.ಮೀ. ನಲ್ಲಿ ಸಿಗುತ್ತದೆ.**

**Π** ಬೆಲೆಯನ್ನು **( $\pi$ = [A] / [r x r] )** ಸೂತ್ರದಿಂದ ಕಂಡುಹಿಡಿಯಿರಿ.

**5.** ಮೇಲ್ಕಂಡ ಪ್ರಯೋಗವನ್ನು ವೃತ್ತಾಕಾರದ ವಸ್ತುವನ್ನು ಉಪಯೋಗಿಸಿ ಗ್ರಾಫ್ ಪೇಪರ್ ಅಲ್ಲಿ ರಚಿಸಿ. ಅದರ ವ್ಯಾಸ **(d)** ಯನ್ನು ಕಂಡುಹಿಡಿಯಿರಿ. ವಿಸ್ತೀರ್ಣವನ್ನು ಈ ಮೊದಲೇ ಹೇಳಿದಂತೆ ಸಣ್ಣ ಸಣ್ಣ ಚೌಕವನ್ನು ಎಣಿಸಿ ಕಂಡುಹಿಡಿಯಿರಿ. ನಂತರ **Π** ಬೆಲೆಯನ್ನು ಕಂಡುಹಿಡಿಯಿರಿ **( $\pi$ = [4 x A] / [d x d] ).**

**6.** ಸಿಲಿಂಡರ್ ಆಕಾರದ ವಸ್ತು (ಉದಾ: ನೀರಿನ ಬಾಟಲ್, ಡಬ್ಬ, ಬೀಕರ್, ಪೈಪ್ ಇತ್ಯಾದಿ) ವನ್ನು ತೆಗೆದುಕೊಂಡು ಅದರಲ್ಲಿ ನೀರು ತುಂಬಿಸಿ. ನೀರಿನ ಘನಫಲ **(V, cc** ಅಲ್ಲಿ **)** ವನ್ನು ಕಂಡುಹಿಡಿಯಿರಿ. ಸಿಲಿಂಡರಿನ ಪಾದದ ತ್ರಿಜ್ಯ **(r)**, ಎತ್ತರ **(h)** ಗಳನ್ನು ಸೆಂ.ಮೀ. ನಲ್ಲಿ ಅಳೆಯಿರಿ. ನಂತರ **Π** ಬೆಲೆಯನ್ನು ಕಂಡುಹಿಡಿಯಿರಿ

**( $\pi$ = [V] / [r x r x h] ). h=** ನೀರಿನ ಎತ್ತರ

ಈ ಚಟುವಟಿಕೆಯನ್ನು ಮೊದಲೇ ಮಾಡಿದ್ದರೂ ಅಥವಾ ಇಲ್ಲದಿದ್ದರೂ ಈಗ ಈ ಚಟುವಟಿಕೆಯನ್ನು ಮಾಡಿ. ಒಂದು ಗುಂಪಿನ ವಿದ್ಯಾರ್ಥಿಗಳು ಈ ಉಪಾಯವನ್ನು ತೆಗೆದುಕೊಂಡು ತಮಗೆ ಪೈನ ಬೆಲೆ ಹಾಗೂ ಅದಕ್ಕೆ ಸಂಭಂದಿಸಿದ ಸೂತ್ರಗಳು ಗೊತ್ತಿಲ್ಲ ಎಂದು ನಟಿಸಬಹುದು.

## ಪೈ ಬಗ್ಗೆ ಮಾಹಿತಿ:

ಪೈನ ಬೆಲೆ, ಲೆಕ್ಕಾಚಾರ ಮತ್ತು ಅದರ ಇತಿಹಾಸದ ಬಗ್ಗೆ ವಿಕಿಪೀಡಿಯಾದಲ್ಲಿ ವಿಸ್ತಾರವಾದ ಮಾಹಿತಿ ಸಿಗುತ್ತದೆ. ಈ ಲೇಖನವನ್ನು ಅರ್ಥೈಸಿಕೊಳ್ಳಲು ಸುಲಭವಾದರೂ ಇದನ್ನು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಶಿಫಾರಸ್ಸು ಮಾಡುವುದಿಲ್ಲ. ಆದರಿಂದ ನಾನು ಶಿಫಾರಸ್ಸು ಮಾಡುವುದೇನೆಂದರೆ ಶಿಕ್ಷಕರು ಈ ಲೇಖನವನ್ನು ಓದಿ ಸಾರಾಂಶವನ್ನು ವಿದ್ಯಾರ್ಥಿಗಳಿಗೆ ಹೇಳಬಹುದು.

ಮೇಲಿನವು ನಮ್ಮ ಕೆಲವು ಸಲಹೆಗಳು - ನಿಮ್ಮ ಸಲಹೆಗಳನ್ನು ಸ್ವೀಕರಿಸಲು ನಮಗೆ ಸಂತೋಷವಾಗುತ್ತದೆ.